# ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ)

(ಕರ್ನಾಟಕ ಸರ್ಕಾರದ ಉದ್ಯಮ)

**ನಂ. 675, ಶ್ರೀ ಕೃಷ್ಣಪ್ರಸಾದ್, ಚಾಮರಾಜ ಜೋಡಿ ರಸ್ತೆ, (ಲಕ್ಷ್ಮಿ ಟಾಕೀಸ್ ಹತ್ತಿರ) ಮೈಸೂರು–24.**

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಹಿಂದುಳಿದ ವರ್ಗಗಳ ಜನರ ಸ್ವಯಂ ಉದ್ಯೋಗಕ್ಕಾಗಿ ಮತ್ತು ನಿಗಮದಿಂದ ಲಭ್ಯವಾಗುವ ವಿವಿಧ ಸವಲತ್ತುಗಳಿಗಾಗಿ 2006–07ರ ಸಾಲಿಗೆ ಮೈಸೂರು ಜಿಲ್ಲೆಗೆ ಕೆಳಕಾಣಿಸಿದಂತೆ ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗಧಿಪಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

**1) ರಾಜ್ಯ ಸರ್ಕಾರದ ಯೋಜನೆಗಳು :**

ಸಾಮಾನ್ಯ ಅರ್ಹತೆಗಳು : ಮೈಸೂರು ಜಿಲ್ಲೆಯ ಖಾಯಂ ವಾಸಿಯಾಗಿದ್ದು, ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿ ಗುಂಪಿಗೆ ಸೇರಿದವರಾಗಿರಬೇಕು. ವಾರ್ಷಿಕ ಕುಟುಂಬದ ಆದಾಯ ರೂ. 22,000/– ಮತ್ತು ವಯಸ್ಸು 18 ರಿಂದ 55 ವರ್ಷದೊಳಗಿರಬೇಕು.

**ಅ) ಚೈತನ್ಯ ಸಬ್ಸಿಡಿ ಮತ್ತು ಮಾರ್ಜಿನ್ ಹಣ ಸಾಲ ಯೋಜನೆ :**

ಈ ಯೋಜನೆಯಲ್ಲಿ ಕೃಷಿ, ವ್ಯಾಪಾರ, ಸೇವಾ ವಲಯ, ಕೈಗಾರಿಕೆಗಳಲ್ಲಿ ಬರುವ ವಿವಿಧ ಚಟುವಟಿಕೆಗಳಿಗೆ ನಿಗಮ ಮತ್ತು ಬ್ಯಾಂಕ್‌ಗಳ ಮೂಲಕ ಪಡೆಯುವ ಸಾಲದ ಮೊತ್ತ ಗರಿಷ್ಠ ರೂ. 1.00 ಲಕ್ಷಗಳಾಗಿದ್ದು, ಇದರಲ್ಲಿ ನಿಗಮದಿಂದ ಗರಿಷ್ಠ ಸಬ್ಸಿಡಿ ರೂ. 5,000/– ಹಾಗೂ ವಾರ್ಷಿಕ ರೂ. 4/– ಗಳ ಬಡ್ಡಿ ದರದಲ್ಲಿ ಮಾರ್ಜಿನ್ ಹಣ ಗರಿಷ್ಠ ರೂ. 20,000/–ಗಳು ಮತ್ತು ಉಳಿದ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್ / ಹಣಕಾಸು ಸಂಸ್ಥೆಗಳ ಮೂಲಕ ಅವರು ವಿಧಿಸುವ ಬಡ್ಡಿದರದಲ್ಲಿ ಲಭ್ಯವಾಗುತ್ತದೆ.

ಜಿಲ್ಲೆಯ ಭೌತಿಕ ಗುರಿ 323, ಆರ್ಥಿಕ ಗುರಿ 38.81 ಲಕ್ಷ ರೂ.

ಆಯ್ಕೆ ವಿಧಾನ : ತಾಲ್ಲೂಕು ಪಂಚಾಯಿತಿ ಮೂಲಕ

**ಆ) ಅರಿವು ವಿದ್ಯಾಸಾಲ ಯೋಜನೆ :–**

ಹಿಂದುಳಿದ ವರ್ಗಗಳ ಪ್ರವರ್ಗ–1 ಮತ್ತು 2ಎಗೆ ಸೇರಿದ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಪದವಿ ಶಿಕ್ಷಣ ಕಾಯ್ದೆ ಸರ್ಕಾರದಿಂದ ಉಚಿತ ಸೀಟು ಪಡೆದವರಿಗೆ ವಾರ್ಷಿಕ ರೂ. 10,000/–ಗಳ ಸಾಲವನ್ನು ಶೇ. 2/–ರ ಬಡ್ಡಿದಂತೆ ನೀಡಲಾಗುವುದು.

ಜಿಲ್ಲೆಯ ಭೌತಿಕ ಗುರಿ 07, ಆರ್ಥಿಕ ಗುರಿ 00.70 ಲಕ್ಷ ರೂ.

ಆಯ್ಕೆ ವಿಧಾನ : ಜಿಲ್ಲಾ ಸಮಿತಿ ಮೂಲಕ

**ಇ) ಗಂಗಾ ಕಲ್ಯಾಣ ಯೋಜನೆ :-**

ಈ ಯೋಜನೆಯಲ್ಲಿ ಖುಷ್ಕಿ ಜಮೀನಿಗೆ ಉಚಿತವಾಗಿ ಕೊಳವೆ ಬಾವಿ ಕೊರೆದು ನೀರಾವರಿ ಸೌಲಭ್ಯ ನೀಡಲಾಗುವುದು.

(1) ವೈಯಕ್ತಿಕ ನೀರಾವರಿ ಯೋಜನೆ : ಪ್ರವರ್ಗ-1 ಮತ್ತು 2ಎ ಗುಂಪಿಗೆ ಸೇರಿದ ಸಣ್ಣ ಮತ್ತು ಅತಿಸಣ್ಣ ಹಿಂದುಳಿದ ವರ್ಗಗಳ ರೈತರಿಗೆ ನೀರಾವರಿಗಾಗಿ ಕೊಳವೆ ಬಾವಿಗೆ ರೂ. 1.00 ಲಕ್ಷಗಳ ಉಚಿತ ಸೌಲಭ್ಯ ನೀಡಲಾಗುವುದು. ಈ ಯೋಜನೆಯಲ್ಲಿ ನಿಗಮದಿಂದ ಕೊಳವೆ ಬಾವಿ ಕೊರೆದು ಪಂಪ್‌ಸೆಟ್ ಅಳವಡಿಸಲಾಗುವುದು. ಫಲಾನುಭವಿಯೇ ವಿದ್ಯುದ್ದೀಕರಣ ವೆಚ್ಚ ಭರಿಸಬೇಕಾಗು ತ್ತದೆ.

ಜಿಲ್ಲೆಯ ಭೌತಿಕ ಗುರಿ 65, ಆರ್ಥಿಕ ಗುರಿ 65.00 ಲಕ್ಷ ರೂ.

ಆಯ್ಕೆ ವಿಧಾನ : ಆಯಾ ಕ್ಷೇತ್ರದ ಶಾಸಕರುಗಳ ಅಧ್ಯಕ್ಷತೆಯ ಸಮಿತಿ.

(2) ಸಾಮೂಹಿಕ ಯೋಜನೆ : ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ-1, 2ಎ, 3ಎ ಮತ್ತು 3ಬಿ ಗುಂಪಿನ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕನಿಷ್ಠ ಮೂರು ಜನರುಳ್ಳ ಒಟ್ಟು 08.00 ಎಕರೆ ವಿಸ್ತೀರ್ಣದ ವರೆಗೆ ಘಟಕ ವೆಚ್ಚ ರೂ. 2.53 ಲಕ್ಷ ಹಾಗೂ ಕನಿಷ್ಠ 5 ಜನರುಳ್ಳ 15 ಎಕರೆ ವಿಸ್ತೀರ್ಣದ ವರೆಗೆ ಘಟಕವೆಚ್ಚ 3.59 ಲಕ್ಷ ವೆಚ್ಚದಲ್ಲಿ ಸಾಮೂಹಿಕ ನೀರಾವರಿ ಸೌಲಭ್ಯವನ್ನು ಉಚಿತವಾಗಿ ನೀಡಲಾಗುತ್ತದೆ.

ಜಿಲ್ಲೆಯ ಭೌತಿಕ ಗುರಿ 11 ಘಟಕ, ಆರ್ಥಿಕ ಗುರಿ 27.83 ಲಕ್ಷ ರೂ.

ಆಯ್ಕೆ ವಿಧಾನ : ಆಯಾ ಕ್ಷೇತ್ರದ ಶಾಸಕರುಗಳ ಅಧ್ಯಕ್ಷತೆಯ ಸಮಿತಿ.

**2) ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆಗಳು:**

ಸಾಮಾನ್ಯ ಅರ್ಹತೆಗಳು : ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿ ಗುಂಪಿಗೆ ಸೇರಿದ್ದು ವಾರ್ಷಿಕ ಆದಾಯವು ನಗರ ಪ್ರದೇಶದವರಿಗೆ ಗರಿಷ್ಠ ರೂ. 55,000/-, ಗ್ರಾಮೀಣ ಪ್ರದೇಶದವರಿಗೆ ಗರಿಷ್ಠ ರೂ. 40,000/- ಇದ್ದು ವಯಸ್ಸು 18 ರಿಂದ 55 ವರ್ಷದೊಳಗಿರ ಬೇಕು.

(1) ಸಾಮಾನ್ಯ ಸಾಲ ಯೋಜನೆಗಳು : ನೀರಾವರಿ ಸಾಲ ಯೋಜನೆಯಡಿಯಲ್ಲಿ ಕೃಷಿ ವಲಯದ ಯೋಜನೆಗಳು, ಸಣ್ಣ ವ್ಯಾಪಾರ, ಸೇವಾ ವಲಯ, ಮಹಿಳಾ ಸಮೃದ್ಧಿ, ಶೈಕ್ಷಣಿಕ ಸಾಲ, ಮೈಕ್ರೋ ಫೈನಾನ್ಸ್ ಮತ್ತು ಸ್ವಯಂ ಸಕ್ಷಮ ಯೋಜನೆಗಳಲ್ಲಿ ಸ್ವಯಂ ಉದ್ಯೋಗಕ್ಕಾಗಿ ವೈಯಕ್ತಿಕ ಘಟಕಗಳಿಗೆ ಘಟಕ ವೆಚ್ಚಕ್ಕೆ ಅನುಗುಣವಾಗಿ ಸಾಲವನ್ನು ನೇರವಾಗಿ ನಿಗಮವು ವಾರ್ಷಿಕ ಶೇ. 4% ರಿಂದ 6ರ ಬಡ್ಡಿದರದಲ್ಲಿ ನೀಡುತ್ತದೆ.

ಜಿಲ್ಲೆಯ ಭೌತಿಕ ಗುರಿ 103 ಘಟಕ, ಆರ್ಥಿಕ ಗುರಿ 33.24 ಲಕ್ಷ ರೂ.

ಆಯ್ಕೆ ವಿಧಾನ : ಜಿಲ್ಲಾ ಸಮಿತಿ / ತಾಲ್ಲೂಕು ಸಮಿತಿ

(2) ನ್ಯೂ ಸ್ವರ್ಣಿಮಾ ಯೋಜನೆ (ಮಹಿಳೆಯರಿಗಾಗಿ) : ಸ್ವಸಹಾಯ ಗುಂಪುಗಳು ಹಾಗೂ ಸ್ತ್ರೀ ಶಕ್ತಿ ಹಾಗೂ ಸ್ವಶಕ್ತಿ ಗುಂಪುಗಳ ಮೂಲಕ ವಿವಿಧ ಆರ್ಥಿಕ ಚಟುವಟಿಕೆಗಳಿಗೆ ಶೇ. 4%ರ ಬಡ್ಡಿ ದರದಲ್ಲಿ ನಿಗಮದಿಂದ ನೇರವಾಗಿ ಸಾಲ ಮಂಜೂರು ಮಾಡಲಾಗುವುದು.

ಜಿಲ್ಲೆಯ ಭೌತಿಕ ಗುರಿ 350, ಆರ್ಥಿಕ ಗುರಿ 42.00 ಲಕ್ಷ ರೂ.

ಆಯ್ಕೆ ವಿಧಾನ : ತಾಲ್ಲೂಕು ಸಮಿತಿ

**3) ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆಗಳು :**

ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ / ವರ್ಗ, ಹಿಂದುಳಿದ ವರ್ಗಗಳ ಎಲ್ಲಾ ಅರ್ಹ ಅಂಗವಿಕಲ ಫಲಾನುಭವಿಗಳಿಗೆ ಗರಿಷ್ಠ ರೂ. 35,000/–ವರೆಗೆ ವಾರ್ಷಿಕ ಶೇ. 5% ಬಡ್ಡಿ ದರದಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲ ನೀಡಲಾಗುವುದು.

ಜಿಲ್ಲೆಯ ಭೌತಿಕ ಗುರಿ 15, ಆರ್ಥಿಕ ಗುರಿ 3.75 ಲಕ್ಷ ರೂ.

ಆಯ್ಕೆ ವಿಧಾನ : ಆಯಾ ತಾಲ್ಲೂಕಿನ ಶಿಶು ಕಲ್ಯಾಣ ಯೋಜನಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ತಾಲ್ಲೂಕು ಸಮಿತಿ.

ನಿಗಮದಿಂದ ಮೇ 6ರ ಮಾಹೆಯಲ್ಲಿ ಈ ಯೋಜನೆಗಳ ಅನುಷ್ಠಾನದ ಬಗ್ಗೆ ಹಾಗೂ ಅರ್ಹ ಫಲಾನುಭವಿಗಳು ಯೋಜನೆ ಪಡೆಯಲು ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಲಾಗಿದೆ. ಮೈಸೂರು ನಗರ ಪ್ರದೇಶದ ವ್ಯಾಪ್ತಿಗೆ ಒಳಪಟ್ಟಂತೆ ಸಾಲದ ಅರ್ಜಿಗಳನ್ನು ನಿಗಮದ ಕಛೇರಿಯಿಂದ ವಿತರಿಸಲಾಗಿದೆ. ತಾಲ್ಲೂಕಿನ ಹಿಂದುಳಿದ ವರ್ಗದವರಿಗೆ ಆಯಾ ತಾಲ್ಲೂಕು ಪಂಚಾಯತ್ ಕಛೇರಿಯಲ್ಲಿ ಅರ್ಜಿಗಳನ್ನು ನೀಡಲು ಕ್ರಮವಹಿಸಲಾಗಿದೆ.

**ಜಿಲ್ಲಾ ವ್ಯವಸ್ಥಾಪಕರು**
ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ)
ಮೈಸೂರು ಜಿಲ್ಲೆ, ಮೈಸೂರು

# ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ), ಮೈಸೂರು ಜಿಲ್ಲೆ, ಮೈಸೂರು.

## 2005–06ರ ಸಾಲಿಗೆ ನಿಗಮದ ವಿವಿಧ ಯೋಜನೆಗಳ ಗುರಿ ಹಾಗೂ ಸಾಧಿಸಿರುವ ಪ್ರಗತಿ ವಿವರ

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ಯೋಜನೆಗಳ ವಿವರ | ಭೌತಿಕ | ವಾರ್ಷಿಕ ಗುರಿ | | ಭೌತಿಕ | ಆರ್ಥಿಕ ಸಾಧನೆ | | ಒಟ್ಟು | ಶೇಕಡಾವಾರು | | ಷರಾ |
|---|---|---|---|---|---|---|---|---|---|---|---|
| | | | ಮಾರ್ಜಿನ್ ಹಣ | ಸಹಾಯ ಧನ | | ಮಾರ್ಜಿನ್ ಹಣ | ಸಹಾಯ ಧನ | | ಭೌತಿಕ | ಆರ್ಥಿಕ | |
| 1. | ಚೈತನ್ಯ ಸಾಲ ಯೋಜನೆ | 278 | 15.47 | 13.90 | 212 | 23.04 | 10.60 | 33.64 | 76.26 | 114.54 | |
| 2. | ಅರಿವು ಯೋಜನೆ | 25 | 2.50 | – | 11 | 1.10 | – | 1.10 | 44.00 | 44.00 | |
| 3. | ನೇರ ಸಾಲ ಯೋಜನೆ : | | | | | | | | | | |
| | 1. ಕೃಷಿ ವಲಯ | 20 | 8.94 | – | 30 | 6.39 | – | 6.39 | 150.00 | 91.48 | |
| | 2. ಸಣ್ಣ ವ್ಯಾಪಾರ | 04 | 1.34 | – | 09 | 3.00 | – | 3.00 | 225.00 | 154.64 | |
| | 3. ಸಾರಿಗೆ ವಲಯ | 07 | 5.75 | – | 10 | 8.22 | – | 8.22 | 142.86 | 142.96 | |
| | 4. ಸೇವಾ ವಲಯ | 04 | 0.76 | – | 03 | 0.57 | – | 0.57 | 75.00 | 75.00 | |
| | 5. ಮೈಕ್ರೋ ಫೈನಾನ್ಸ್ | – | – | – | 58 | 5.51 | – | 5.51 | – | – | |
| | 6. ನ್ಯೂ ಸ್ವರ್ಣಿಮಾ ಸಾಲ | 350 | 41.95 | – | 443 | 56.02 | – | 56.02 | 126.57 | 133.54 | |
| 4. | ಅಂಗವಿಕಲರಿಗೆ ಸಾಲ ಯೋಜನೆ | 15 | 3.75 | – | 18 | 3.70 | – | 3.70 | 120.00 | 98.67 | |
| 5. | ಗಂಗಾ ಕಲ್ಯಾಣ ಯೋಜನೆ : | | | | | | | | | | |
| | 1. ಸಾಮೂಹಿಕ ಕೊಳವೆ ಬಾವಿ ಯೋಜನೆ | 07 | – | 17.71 | – | – | – | – | | | |
| | 2. ವೈಯಕ್ತಿಕ ಕೊಳವೆ ಬಾವಿ ಯೋಜನೆ | 45 | – | 29.25 | 17 | – | – | – | | | |

ಜಿಲ್ಲಾ ವ್ಯವಸ್ಥಾಪಕರು

# ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ), ಮೈಸೂರು ಜಿಲ್ಲೆ, ಮೈಸೂರು.

## 2006–07ರ ಸಾಲಿಗೆ ನಿಗಮದ ವಿವಿಧ ಯೋಜನೆಗಳ ಗುರಿ ಹಾಗೂ ಸಾಧಿಸಿರುವ ಪ್ರಗತಿ ವಿವರ (15.02.2007ರವರೆಗೆ)

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ಯೋಜನೆಗಳ ವಿವರ | ವಾರ್ಷಿಕ ಗುರಿ | | | ಆರ್ಥಿಕ ಸಾಧನೆ | | | | ಷರಾ |
|---|---|---|---|---|---|---|---|---|---|
| | | ಭೌತಿಕ | ಮಾರ್ಜಿನ್ ಹಣ | ಸಹಾಯ ಧನ | ಭೌತಿಕ | ಮಾರ್ಜಿನ್ ಹಣ | ಸಹಾಯ ಧನ | ಒಟ್ಟು | |
| 1. | ಚೈತನ್ಯ ಸಾಲ ಯೋಜನೆ | 323 | 22.66 | 16.15 | 200 | 21.06 | 10.00 | 31.06 | |
| 2. | ಅರಿವು ಯೋಜನೆ | 07 | 0.70 | – | 13 | 1.30 | – | 1.30 | |

| | | | | | | | | | |
|---|---|---|---|---|---|---|---|---|---|
| 3. | <u>ನೇರ ಸಾಲ ಯೋಜನೆ</u> : | | | | | | | | |
| | 1. ಕೃಷಿ ವಲಯ | 20 | 7.60 | – | 10 | 1.33 | – | 1.33 | |
| | 2. ಸಣ್ಣ ವ್ಯಾಪಾರ | 04 | 1.33 | – | 3 | 0.80 | – | 0.80 | |
| | 3. ಸಾರಿಗೆ ವಲಯ | 08 | 8.36 | – | 8 | 6.62 | – | 6.62 | |
| | 4. ಸೇವಾ ವಲಯ | 04 | 0.76 | – | 4 | 0.60 | – | 0.60 | |
| | 5. ಸ್ವಯಂ ಸಕ್ಷಮ | 01 | 0.95 | – | – | – | – | – | |
| | 6. ಮೈಕ್ರೋ ಫೈನಾನ್ಸ್ | 60 | 11.40 | – | 62 | 8.64 | – | 8.64 | |
| | 7. ನ್ಯೂ ಸ್ವರ್ಣಿಮಾ ಸಾಲ | 350 | 42.00 | – | 326 | 48.00 | – | 48.00 | |
| | 8. ಶೈಕ್ಷಣಿಕ ನೇರ ಸಾಲ | 03 | 2.14 | – | – | – | – | – | |
| | 9. ಮಹಿಳಾ ಸಂವೃದ್ಧಿ | 03 | 0.71 | – | 3 | 0.45 | – | 0.45 | |
| | 10. ಭೂ ರಹಿತ ಕೃಷಿ / ಕೂಲಿ ಕಾರ್ಮಿಕರಿಗೆ ವಿಶೇಷ ಯೋಜನೆ | 40 | 4.00 | 2.00 | 40 | 4.00 | 2.00 | 6.00 | |
| | 11. ಹಿಂದುಳಿದ ವರ್ಗಗಳ ಅಲೆಮಾರಿ ಜನಾಂಗದವರಿಗೆ ವಿಶೇಷ ಯೋಜನೆ | 39 | 3.90 | 1.95 | 44 | 4.40 | 2.20 | 6.60 | |
| | 12. ಶ್ರಮಶಕ್ತಿ ಯೋಜನೆ | 616 | 128.18 | – | 107 | 24.95 | – | 24.95 | |
| | 13. ಗಂಗಾ ಕಲ್ಯಾಣ ಸಾಲ ಯೋಜನೆ | 20 | 2.00 | – | 4 | 0.40 | – | 0.40 | |
| 4. | ಅಂಗವಿಕಲರಿಗೆ ಸಾಲ ಯೋಜನೆ | 15 | 3.75 | – | 5 | 1.00 | – | 1.00 | |
| 5. | <u>ಗಂಗಾ ಕಲ್ಯಾಣ ಯೋಜನೆ</u> : | | | | | | | | |
| | 1. ಸಾಮೂಹಿಕ ಕೊಳವೆ ಬಾವಿ ಯೋಜನೆ | 11 | – | 27.83 | – | – | – | – | |
| | 2. ವೈಯಕ್ತಿಕ ಕೊಳವೆ ಬಾವಿ ಯೋಜನೆ | 65 | – | 65.00 | – | – | – | – | ಕೊಳವೆಬಾವಿ ಕೊರೆಯುವ ಕೆಲಸ ಪ್ರಗತಿಯಲ್ಲಿದೆ. |
| | <u>ಒಟ್ಟು</u> | **1589** | **240.44** | **112.93** | **827** | **123.55** | **14.20** | **175.70** | |

**ಜಿಲ್ಲಾ ವ್ಯವಸ್ಥಾಪಕರು**
ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ)
ಮೈಸೂರು ಜಿಲ್ಲೆ, ಮೈಸೂರು

# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ.)

(ಕರ್ನಾಟಕ ಸರ್ಕಾರದ ಉದ್ಯಮ)

**# 675, "ಕೃಷ್ಣಪ್ರಸಾದ್", ಚಾಮರಾಜಜೋಡಿ ರಸ್ತೆ, (ಲಕ್ಷ್ಮಿ ಟಾಕೀಸ್ ಹತ್ತಿರ), ಮೈಸೂರು – 570 024**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 2006–07ನೇ ಸಾಲಿನಲ್ಲಿ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧರು, ಪಾರ್ಸಿ, ಸಿಖ್‌ರು ಹಾಗೂ ಆಂಗ್ಲೋ ಇಂಡಿಯನ್ಸ್ ಜನಾಂಗಕ್ಕೆ ಸೇರಿದ್ದು ವಾರ್ಷಿಕ ಆದಾಯ ರೂ. 22,000/– ಗಳ ಒಳಗಿದ್ದು ಸ್ವಯಂ ಉದ್ಯೋಗ ಕೈಗೊಳ್ಳಲು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಿದೆ.

ನಿಗಮದ ಎಲ್ಲಾ ಯೋಜನೆಗಳಲ್ಲಿ 60:20:20 ಅನುಪಾತದ ರೀತಿಯಲ್ಲಿ ಅಂದರೆ, 60% ರಷ್ಟು ಮುಸ್ಲಿಂ, 20%ರಷ್ಟು ಕ್ರೈಸ್ತರು ಹಾಗೂ 20%ರಷ್ಟು ಇತರೆ ಅಂದರೆ ಜೈನರು, ಬೌದ್ಧರು, ಪಾರ್ಸಿ ಮತ್ತು ಆಂಗ್ಲೋ ಇಂಡಿಯನ್ ಜನಾಂಗದವರಿಗೆ ನಿಗಮದ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ.

## 2006–07ರ ಸಾಲಿನ ನಿಗಮದ ಯೋಜನೆಗಳ ವಿವರ

**1. ಸ್ವಾವಲಂಬನಾ ಸಬ್ಸಿಡಿ ಕಂ. ಸಾಫ್ಟ್ ಲೋನ್ ಯೋಜನೆ :**

**ಭೌತಿಕ ಗುರಿ – 530 ಆರ್ಥಿಕ ಗುರಿ – 42.68 (ಲಕ್ಷ ರೂ.ಗಳಲ್ಲಿ)**

ಈ ಯೋಜನೆಯಲ್ಲಿ ಗರಿಷ್ಠ ಸಾಲದ ಮೊತ್ತ 1.00 ಲಕ್ಷ ರೂ.ಗಳಿದ್ದು, ನಿಗಮದಿಂದ ಸಹಾಯಧನ 5%ರಷ್ಟು ಅಥವಾ ಗರಿಷ್ಠ 5,000/– ರೂ.ಗಳು ಹಾಗೂ ಮಾರ್ಜಿನ್ ಹಣ 20%ರಷ್ಟು, ಗರಿಷ್ಠ 20,000/– ರೂ.ಗಳಂತೆ ವಾರ್ಷಿಕ 7% ಬಡ್ಡಿ ದರದಲ್ಲಿ ಮತ್ತು ಉಳಿದ ಮೊತ್ತವನ್ನು ರಾಷ್ಟ್ರೀಕೃತ ಹಣಕಾಸು ಸಂಸ್ಥೆಗಳು, ಹಾಗೂ ಗ್ರಾಮೀಣ ಹಣಕಾಸು ಸಂಸ್ಥೆಗಳ ಮೂಲಕ ಅವರು ವಿಧಿಸುವ ಬಡ್ಡಿ ದರದಲ್ಲಿ ವಿವಿಧ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಅನುಷ್ಠಾನಗೊಳಿಸಲಾಗುತ್ತದೆ.

**ಆಯ್ಕೆ ವಿಧಾನ :**

*ಪುಟ 2ಕ್ಕೆ ಮುಂದುವರೆದಿದೆ.........*

ಗ್ರಾಮಾಂತರ ಪ್ರದೇಶದವರಿಗೆ ಆಯಾ ತಾಲ್ಲೂಕು ಪಂಚಾಯ್ತಿ ಮುಖಾಂತರ ಹಾಗೂ ನಗರ ಪ್ರದೇಶದವರಿಗೆ ನಿಗಮದ ಕಛೇರಿಯಲ್ಲಿ ಅರ್ಜಿಗಳನ್ನು ಕರೆಯಲಾಗುವುದು. ಬಂದ ಅರ್ಜಿಗಳನ್ನು ಗುರಿಗೆ ಅನುಗುಣವಾಗಿ ಬ್ಯಾಂಕುಗಳಿಗೆ ಶಿಫಾರಸ್ಸು ಮಾಡಲಾಗುವುದು. ಬ್ಯಾಂಕುಗಳಿಂದ ಬಂದ ಮಂಜೂರಾತಿ ಒಪ್ಪಿಗೆ ಪತ್ರಗಳನ್ನು ಜಿಲ್ಲಾ ಸಮಿತಿ ಅನುಮೋದನೆ ಪಡೆದು ನಿಗಮದ ಕೇಂದ್ರ ಕಛೇರಿಗೆ ಹಣ ಬಿಡುಗಡೆಗಾಗಿ ಕಳುಹಿಸಲಾಗುತ್ತದೆ.

2. **ಅರಿವು (ವಿದ್ಯಾಭ್ಯಾಸ) ಸಾಲ ಯೋಜನೆ :**

**ಭೌತಿಕ ಗುರಿ : 128 ಆರ್ಥಿಕ ಗುರಿ – 19.39 ಲಕ್ಷ ರೂ.ಗಳು**

ಈ ಯೋಜನೆಯಲ್ಲಿ ಎಂ.ಬಿ.ಬಿ.ಎಸ್., ಇಂಜಿನಿಯರಿಂಗ್ ಹಾಗೂ ಬಿ.ಡಿ.ಎಸ್. ಬಿ.ಸಿ.ಎ. ಎಂ.ಸಿ.ಎ. ಬಿ.ಎಡ್., ಎಂ.ಎಡ್., ಡಿ.ಎಡ್., ಡಿಪ್ಲೊಮಾ ಅಂತಹ ವೃತ್ತಿಪರ ವ್ಯಾಸಂಗ ಮಾಡುತ್ತಿರುವ ಮತೀಯ ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ನಿಗಮದಿಂದ ವಾರ್ಷಿಕವಾಗಿ ಅವರ ವ್ಯಾಸಂಗಕ್ಕೆ ಅವಶ್ಯಕತೆಗೆ ಅನುಗುಣವಾಗಿ ರೂ. 10,000/– ಗಳಿಂದ ಗರಿಷ್ಠ 25,000/– ಗಳ ವರೆಗೂ 2%ರ ಬಡ್ಡಿ ದರದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಸಾಲ ವಿತರಿಸಲಾಗುವುದು.

**ಆಯ್ಕೆ ವಿಧಾನ ;**

ಈ ಯೋಜನೆಗೆ ನಿಗಮದಿಂದ ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿ ಅರ್ಜಿಗಳನ್ನು ನಿಗಮದಿಂದ ನೇರವಾಗಿ ವಿತರಿಸಲಾಗುವುದು. ಅರ್ಹ ವಿದ್ಯಾರ್ಥಿಗಳನ್ನು ಜಿಲ್ಲಾ ಸಮಿತಿಯ ಮೂಲಕ ಆಯ್ಕೆ ಮಾಡಿ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಹಣ ಬಿಡುಗಡೆಗಾಗಿ ಕಳುಹಿಸಲಾಗುವುದು.

3. **ಗಂಗಾಕಲ್ಯಾಣ ಯೋಜನೆ : (ವೈಯುಕ್ತಿಕ ಕೊಳವೆ ಬಾವಿ)**

**ಭೌತಕ ಗುರಿ : 50 ಆರ್ಥಿಕ ಗುರಿ – 50 ಲಕ್ಷಗಳಲ್ಲಿ**

ಈ ಯೋಜನೆಯಲ್ಲಿ 2 ರಿಂದ 5 ಎಕರೆ ಖುಷ್ಕಿ ಜಮೀನುಳ್ಳ ಮತೀಯ ಅಲ್ಪಸಂಖ್ಯಾತರಾದ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ನೀರಾವರಿ ಕೊಳವೆಬಾವಿಗಳನ್ನು ಕೊರೆಯಲು ರೂ. 65,000/– ರೂ.ಗಳ ಸಹಾಯಧನ ನೀಡಲಾಗುವುದು. (ರೂ. 1,00,000.00ಗಳ ಅನುಮೋದನೆಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿರುತ್ತದೆ) ನಿಗಧಿತ ಅರ್ಜಿಫಾರಂಗಳನ್ನು ನಿಗಮದ ಕಛೇರಿಯಲ್ಲಿ ನೀಡಲಾಗುವುದು.

**ಆಯ್ಕೆ ವಿಧಾನ**

*ಪುಟ 3ಕ್ಕೆ ಮುಂದುವರೆದಿದೆ.........*

ಈ ಯೋಜನೆಯಲ್ಲಿ ಕ್ಷೇತ್ರವಾರು ಫಲಾನುಭವಿಗಳನ್ನು ಆಯಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಗುವುದು. ಆಯ್ಕೆ ಯಾದ ಫಲಾನುಭವಿಗಳನ್ನು ಕೇಂದ್ರ ಕಛೇರಿಗೆ ಕಳುಹಿಸಲಾಗುವುದು. ಸರ್ಕಾರದಿಂದ ಅಂಗೀಕರಿಸಲ್ಪಟ್ಟ ಡ್ರಿಲ್ಲಿಂಗ್ ಏಜೆನ್ಸಿಗಳಿಂದ ಕೊಳವೆಬಾವಿಗಳನ್ನು **"ನೀರಿಲ್ಲದಿದ್ದರೆ ಹಣವಿಲ್ಲ"** ಎಂಬ ನಿಬಂಧನೆಯೊಂದಿಗೆ ಕೊಳವೆಬಾವಿ ಕೊರೆಸಿ, ಪಂಪ್‌ಸೆಟ್ ನೀಡಲಾಗುವುದು. ವಿದ್ಯುದೀಕರಣ ವೆಚ್ಚವನ್ನು ಫಲಾನುಭವಿಯೇ ಭರಿಸಬೇಕಾಗುವುದು.

**ಜಿಲ್ಲಾ ವ್ಯವಸ್ಥಾಪಕರು**

# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ), ಮೈಸೂರು ಜಿಲ್ಲೆ, ಮೈಸೂರು.
# 2005-06ರ ಸಾಲಿಗೆ ನಿಗಮದ ವಿವಿಧ ಯೋಜನೆಗಳ ಗುರಿ ಹಾಗೂ ಸಾಧಿಸಿರುವ ಪ್ರಗತಿ ವಿವರ

**ಲಕ್ಷ ರೂ.ಗಳಲ್ಲಿ**

| ಕ್ರ. ಸಂ. | ಯೋಜನೆಗಳ ವಿವರ | ಭೌತಿಕ | ವಾರ್ಷಿಕ ಗುರಿ | | | ಭೌತಿಕ | ಆರ್ಥಿಕ ಸಾಧನೆ | | | ಶೇಕಡಾವಾರು | | ಷರಾ |
|---|---|---|---|---|---|---|---|---|---|---|---|---|
| | | | ಮಾರ್ಜಿನ್ ಹಣ | ಸಹಾಯ ಧನ | ಒಟ್ಟು | | ಮಾರ್ಜಿನ್ ಹಣ | ಸಹಾಯ ಧನ | ಒಟ್ಟು | ಭೌತಿಕ | ಆರ್ಥಿಕ | |
| 1. | ಸ್ವಾವಲಂಬನಾ ಸಾಲ ಯೋಜನೆ | 210 | 5.89 | 10.50 | 16.39 | 132 | 6.55 | 6.60 | 13.15 | 62.86 | 80.23 | |
| 2. | ಅರಿವು ಯೋಜನೆ | 20 | 3.50 | – | – | 29 | 5.35 | – | 5.35 | 145.00 | 152.86 | |
| 3. | ನೇರ ಸಾಲ ಯೋಜನೆ : | | | | | | | | | | | |
| | 1. ನೀಡ್ ಬೇಸ್ಡ್ | 40 | 20.00 | – | – | 14 | 4.35 | – | 4.35 | 35.00 | 21.75 | |
| | 2. ಮೈಕ್ರೋ ಲೋನ್ | 39 | 3.90 | – | – | 13 | 1.30 | – | 1.30 | 33.33 | 33.33 | |
| | 3. ಕೃಷಿ ವಲಯ | 15 | 5.25 | – | – | 02 | 0.70 | – | 0.70 | 13.33 | 13.33 | |
| | 4. ಸಾರಿಗೆ ವಲಯ | 20 | 20.00 | – | – | 04 | 3.29 | – | 3.29 | 20.00 | 16.45 | |
| 4. | ಗಂಗಾ ಕಲ್ಯಾಣ ಯೋಜನೆ : | | | | | | | | | | | |
| | 1. ಸಾಮೂಹಿಕ ಕೊಳವೆ ಬಾವಿ | | | | | | | | | | | |

| | | | | | | | | | | | | |
|---|---|---|---|---|---|---|---|---|---|---|---|---|
| | ಯೋಜನೆ | 05 | – | 15.00 | – | | – | – | | – | – | |
| | 2. ವೈಯಕ್ತಿಕ ಕೊಳವೆ ಬಾವಿ | | | | | 22 | | | 14.30 | | | |
| | ಯೋಜನೆ | 25 | – | 16.25 | – | | – | – | | – | – | |

**ಜಿಲ್ಲಾ ವ್ಯವಸ್ಥಾಪಕರು**
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ)
ಮೈಸೂರು

# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ), ಮೈಸೂರು ಜಿಲ್ಲೆ, ಮೈಸೂರು.

## 2005–06ರ ಸಾಲಿಗೆ ನಿಗಮದ ವಿವಿಧ ಯೋಜನೆಗಳ ನಿಗಧಿಪಡಿಸಿದ ಗುರಿ ಹಾಗೂ ಸಾಧಿಸಿರುವ ಪ್ರಗತಿ ವಿವರ

## ಜೂನ್–30ರವರೆಗೆ

ಲಕ್ಷ ರೂ.ಗಳಲ್ಲಿ

| ಕ್ರ. | ಯೋಜನೆಗಳ ವಿವರ | ಭೌತಿ | ವಾರ್ಷಿಕ ಗುರಿ | | ಭೌತಿಕ | ಆರ್ಥಿಕ ಸಾಧನೆ | ಷರಾ |
|---|---|---|---|---|---|---|---|

| ಸಂ. | | ಕ | ಮಾರ್ಜಿನ್ ಹಣ | ಸಹಾಯ ಧನ | ಒಟ್ಟು | | ಮಾರ್ಜಿನ್ ಹಣ | ಸಹಾಯ ಧನ | ಒಟ್ಟು | |
|---|---|---|---|---|---|---|---|---|---|---|
| 1. | ಸ್ವಾವಲಂಬನಾ ಸಾಲ ಯೋಜನೆ | 523 | 27.08 | 15.60 | 42.68 | 241 | 13.75 | 6.40 | 20.15 | |
| 2. | ಅರಿವು ಯೋಜನೆ | 128 | 19.39 | – | 19.39 | 73 | 9.34 | – | 9.34 | |
| 3. | ಗಂಗಾ ಕಲ್ಯಾಣ ಯೋಜನೆ :<br>1. ವೈಯಕ್ತಿಕ ಕೊಳವೆ ಬಾವಿ ಯೋಜನೆ | 50 | – | 50 | – | – | – | – | – | ಕೊಳವೆಬಾವಿ ಕೊರೆಯುವ ಕೆಲಸ ಪ್ರಗತಿಯಲ್ಲಿದೆ. |
| 4. | ಶ್ರಮಶಕ್ತಿ ಯೋಜನೆ | 70 | 17.50 | – | – | – | – | – | – | 65 ಅರ್ಜಿಗಳನ್ನು ಪಡೆಯಲಾಗಿದ್ದು ಜಿಲ್ಲಾ ಸಮಿತಿಗೆ ಮಂಡಿಸಿದೆ. |
| 5. | ಭೂ ಖರೀದಿ ಯೋಜನೆ | 10 | 6.00 | – | – | -- | – | – | – | ಅರ್ಜಿಗಳನ್ನು ಆಹ್ವಾನಿಸಲಾಗಿದೆ. |

**ಜಿಲ್ಲಾ ವ್ಯವಸ್ಥಾಪಕರು**
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ)
ಮೈಸೂರು